1	2
ಪ್ರಗತಿ ಹಂತದಲ್ಲಿರುವ ನಬಾರ್ಡ್ ಕಟ್ಟಡಗಳು	
1	ಅನಂತಪುರ ಆರ್.ಐ.ಡಿ.ಎಫ್–12
2	ಮೇಲಿನಗೂಕುಂಟೆ ಆರ್.ಐ.ಡಿ.ಎಫ್–13
3	ಗುಮ್ಮಕಲ್ಲು ಆರ್.ಐ.ಡಿ.ಎಫ್–12

531 ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ ಮಾನ್ಯ ಜವಳಿ ಮತ್ತು ಯುವಜನಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ನಷ್ಟ ಅನುಭವಿಸುತ್ತಿರುವ ಸಹಕಾರಿ ನೂಲಿನ ಗಿರಣಿಗಳು ಎಷ್ಟು; (ಇವುಗಳ ವಿವರಗಳನ್ನು ಒದಗಿಸುವುದು)

ಆ) ನಷ್ಟವನ್ನು ಅನುಭವಿಸುತ್ತಿರುವ ಗಿರಣಿಗಳ ಪುನಃಶ್ಚೇತನಕ್ಕೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು;

ಇ) ಈ ರೀತಿ ನಷ್ಟವನ್ನು ಅನುಭವಿಸುತ್ತಿರುವ ಗಿರಣಿಗಳಿಂದ ವಾರ್ಷಿಕ ಎಷ್ಟು ಮಾನವಶಕ್ತಿ ನಷ್ಟವಾಗಿದೆ; (ಲಾಸ್ ಆಫ್ ಮ್ಯಾನ್ ಪವರ್)?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ ಮತ್ತು ಯುವಜನ ಸೇವೆ ಸಚಿವರು)

ಅ) ರಾಜ್ಯದಲ್ಲಿನ ಎಲ್ಲಾ 9 ಸಹಕಾರಿ ನೂಲಿನ ಗಿರಣಿಗಳು ನಷ್ಟವನ್ನು ಅನುಭವಿಸುತ್ತಿವೆ. 31–3–2009ರಲ್ಲಿದ್ದಂತೆ ನಷ್ಟಗಳ ವಿವರ:–

(ರೂ. ಲಕ್ಷಗಳಲ್ಲಿ)

1	ಬನಹಟ್ಟಿ ಸಹಕಾರಿ ನೂಲಿನ ಗಿರಣಿ ನಿಯಮಿತ, ಬನಹಟ್ಟಿ	242.50
2	ಗದಗ ಸಹಕಾರಿ ನೂಲಿನ ಗಿರಣಿ ನಿಯಮಿತ, ಹುಲಕೋಟಿ	746.75
3	ಫಾರ್ಮರ್ಸ್ ಸಹಕಾರಿ ನೂಲಿನ ಗಿರಣಿ ನಿಯಮಿತ, ಹುಲಕೋಟಿ	1659.60

4	ರೈತರ ಸಹಕಾರಿ ನೂಲಿನ ಗಿರಣಿ ನಿಯಮಿತ, ರಾಣೆಬೆನ್ನೂರು	4766.61
5	ತುಂಗಭದ್ರಾ ರೈತರ ಸಹಕಾರಿ ನೂಲಿನ ಗಿರಣಿ ನಿಯಮಿತ, ರಾಣೆಬೆನ್ನೂರು	2387.88
6	ಮಲಪ್ರಭಾ ಸಹಕಾರಿ ನೂಲಿನ ಗಿರಣಿ ನಿಯಮಿತ, ಸವದತ್ತಿ	3375.83
7	ಬೆಳಗಾಂ ಸಹಕಾರಿ ನೂಲಿನ ಗಿರಣಿ ನಿಯಮಿತ, ಬೆಳಗಾಂ	2103.93
8	ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ ನಿಯಮಿತ, ಲಕ್ಷ್ಮೇಶ್ವರ	2749.72
9	ಶ್ರೀ ವೆಂಕಟೇಶ ಸಹಕಾರಿ ನೂಲಿನ ಗಿರಣಿ ನಿಯಮಿತ, ಅಣ್ಣಿಗೇರಿ	3712.41
	ಒಟ್ಟು	**21745.23**

ಆ) 1) ಹುಲಕೋಟಿಯ ಗದಗ ಸಹಕಾರಿ ನೂಲಿನ ಗಿರಣಿಯನ್ನು ರೂ. 920.00 ಲಕ್ಷಗಳ ಯೋಜನಾ ವೆಚ್ಚದಲ್ಲಿ ಆಧುನೀಕರಣಗೊಳಿಸಲಾಗಿದೆ.

2) ಬನಹಟ್ಟಿಯ ಸಹಕಾರಿ ನೂಲಿನ ಗಿರಣಿಯ ಆಧುನೀಕರಣಕ್ಕಾಗಿ ರೂ. 13.05 ಕೋಟಿಗಳು ಮಂಜೂರಾಗಿದ್ದು, ಈ ಪೈಕಿ ರೂ. 3.26 ಕೋಟಿಗಳು ಬಿಡುಗಡೆ ಮಾಡಲಾಗಿರುತ್ತದೆ.

3) ಹುಲಕೋಟಿಯ ದಿ ಫಾರ್ಮರ್ಸ್ ಸಹಕಾರಿ ನೂಲಿನ ಗಿರಣಿಯ ಪುನಃಶ್ಚೇತನ/ನವೀಕರಣ ಯೋಜನೆಯ ಅನುಷ್ಠಾನಕ್ಕಾಗಿ ರೂ. 853.74 ಲಕ್ಷಗಳು ಬಿಡುಗಡೆಯಾಗಿದ್ದು, ಈ ಪೈಕಿ ರೂ. 812.43 ಲಕ್ಷಗಳನ್ನು ಗಿರಣಿಯು ವಿನಿಯೋಗಿಸಿರುತ್ತದೆ.

ಇ) 4,97,199 ದಿನಗಳು.

431 ಶ್ರೀ ಬಾಲಕೃಷ್ಣ ಹೆಚ್.ಸಿ. ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಮೈಸೂರು ರಸ್ತೆಯ ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ